ಶ್ರೀ ಜೆ. ಹೆಚ್. ಪಟೇಲ್.—ಪತ್ರಿಕೆಗಳಿಗೆ ಜಾಹಿರಾತು ಕೊಡುವುದು ಏತಕ್ಕೆಂದರೆ ಇಂಥ ವೇಕೆನ್ಸಿಗಳಿವೆ, ಅರ್ಹತೆ ಇನ್ನವರು ಅಪ್ಲೈ ಮಾಡಬಹುದು ಎಂದು ಅದರ ಜೊತೆಗೆ ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನಿಂದಲೂ ವಿವರಗಳನ್ನು ತರಿಸಿಕೊಳ್ಳುತ್ತೇವೆ.

ಶ್ರೀ ಎನ್. ಎಂ. ಅಡ್ಯಂತಾಯ.—ನೇಮಕಾತಿ ಮಾಡಿದ್ದು .....

ಅಧ್ಯಕ್ಷರು.—ಇದು ಒಳ್ಳೆಯ ಪದ್ಧತಿಯಲ್ಲ. ಪ್ರಶ್ನೆ ಕೇಳಿದಿರಿ, ಮುಗಿಯಿತು.

ಶ್ರೀ ಜೆ. ಹೆಚ್. ಪಟೇಲ್.—ಸಾರ್ವಜನಿಕರ ಮಾಹಿತಿಗೋಸ್ಕರ ಜಾಹಿರಾತು ಮಾಡುವುದು ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರು ತರಿಸಿಕೊಳ್ಳುವುದಾಗಲಿ ಬೇರೆ ಯಾವುದೇ ಆಗಲಿ, ಪ್ರೊಸೀಜರ್ ಪ್ರಕಾರ ಹೋಗುತ್ತದೆ. ಪತ್ರಿಕೆಗಳಿಗೆ ಜಾಹಿರಾತು ಕೊಟ್ಟರೆ ತಪ್ಪಾಗುತ್ತದೆಯೆ ?

ಶ್ರೀ ಎಸ್. ಬಂಗಾರಪ್ಪ.—ಪತ್ರಿಕೆಗಳ ಮೂಲಕ ಪ್ರಕಟಿಸಿ ಅರ್ಜಿಗಳನ್ನು ತೆಗೆದುಕೊಂಡರೆ. ಅದರ ಅರ್ಥವೇನು ? ಪತ್ರಿಕೆಯ ಪ್ರಕಟಣೆಯ ಪ್ರಕಾರ ಅರ್ಜಿಗಳು ಬರುತ್ತವೆ. ಆಆಧಾರದ ಮೇಲೂ ಸಂದರ್ಶನಕ್ಕೆ ಕರೆಯುವುದು ನಡೆಯುತ್ತದೆಂದು ಅರ್ಥ. ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಪಟ್ಟಿಯನ್ನು ತರಿಸಿಕೊಳ್ಳುವುದಾದರೆ ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುವ ಅವಶ್ಯಕತೆಯಾದರು ಏನು ?

ಶ್ರೀ ಜೆ. ಹೆಚ್. ಪಟೇಲ್.—ಅಡಿಷನಲ್ ಆಗಿ ಯಾವುದೋ ಕ್ಯಾಟಗರಿ ನೌಕರರು ಬೇಕಾಗಿರುತ್ತಾರೆಂದು ಇಟ್ಟುಕೊಳ್ಳಿ, ಪೂರ್ಣತ ನಾವು ಉದ್ಯೋಗ ವಿನಿಮಯ ಕೇಂದ್ರದಿಂದಲೇ ತೆಗೆದುಕೊಳ್ಳುವುದು. ಅಡಿಷನಲ್ ಆಗಿ ಬೇಕಾದಾಗ ಪತ್ರಿಕೆಗಳಿಗೆ ಜಾಹಿರಾತು ಕೊಟ್ಟು ಆರಿಸಿಕೊಳ್ಳುವುದು,

ಶ್ರೀ ಎಸ್. ಬಂಗಾರಪ್ಪ.—ನೀವು ಏನು ಟ್ವಿಸ್ಟ್ ಮಾಡುತ್ತೀರಿ ?

ಅಧ್ಯಕ್ಷರು.—ನಿಮಗೆ ಉತ್ತರ ಕೇಳುವುದು ಬೇಕಾಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ ಆಧಾರದ ಮೇಲೆಯೇ ಸೆಲೆಕ್ಟ್ ಮಾಡುವುದು ಅಲ್ಲ.

ಅಧ್ಯಕ್ಷರು.—ಇಲ್ಲಿಗೆ ಆ ವಿಷಯ ಪೂರ್ಣಾಯವಾಯಿತು. ಮುಂದಿನ ಪ್ರಶ್ನೆಯನ್ನು ಶ್ರೀ ಎಂ. ಶಿವಣ್ಣನವರೇ ತಾವು ಕೇಳಿ.

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಒದಗಿಸುವ ಬಗ್ಗೆ

೨೯೫೨. ಶ್ರೀ ಎಂ. ಶಿವಣ್ಣ (ಹೆಚ್.ಡಿ.ಕೋಟೆ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇದುವರೆಗೂ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿರುವ ಗ್ರಾಮಗಳೆಷ್ಟು ?

ಆ) ಇನ್ನು ವಿದ್ಯುತ್ ಒದಗಿಸಬೇಕಾಗಿರುವ ಗ್ರಾಮಗಳೆಷ್ಟು ?

ಇ) ಇನ್ನು ಎಷ್ಟು ವರ್ಷಗಳಲ್ಲಿ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಸೌಲಭ್ಯ ಒದಗಿಸಲಾಗುವುದು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೬೧ರ ಜನಗಣತಿಯಂತೆ ೩೧-೮-೬೮ರ ವೇಳೆಗೆ ೨೬೪೦೫ ಕಂದಾಯ ಗ್ರಾಮಗಳ ವಿದ್ಯುದ್ದೀಕರಣವಾಗಿದೆ.

ಆ) ೧೯೭೧ರ ಜನಗಣತಿಯ ಪ್ರಕಾರ ೧೯ ಗ್ರಾಮಗಳಿಗೆ ವಿದ್ಯುದ್ದೀಕರಣವಾಗಬೇಕಾಗಿದೆ.

ಇ) ಬಾಕಿ ಉಳಿದಿರುವ ಎಲ್ಲಾ ಕಂದಾಯ ಗ್ರಾಮಗಳನ್ನು ೧೯೭೮-೭೯ರಲ್ಲಿ ವಿದ್ಯುದ್ದೀಕರಣ ಗೊಳಿಸಲಾಗುವುದು.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಈಗ ೨೬೪೦೫ ಗ್ರಾಮಗಳಿಗೆ ವಿದ್ಯುತ್ ಆಳವಡಿಸಲಾಗಿದೆ, ಇನ್ನೂ ೯೯ ಗ್ರಾಮಗಳಿಗೆ ವಿದ್ಯುತ್ ಕೊಡಬೇಕಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದರ ಜೊತೆಗೆ ಅನೇಕ ಹ್ಯಾಮಲೆಟ್ ಗ್ರಾಮಗಳು ರಾಜ್ಯದಲ್ಲಿವೆ. ಅದರ ಬಗ್ಗೆ ಏನು ಕ್ರಮ ತೆಗೆದು

ಕೊಳ್ಳುತ್ತೀರಿ ? ಮತ್ತೆ ಈಗಾಗಲೇ ವಿದ್ಯುದ್ದೀಕರಣಗೊಳಿಸಿರುವ ಗ್ರಾಮಗಳಲ್ಲಿ ಕಂಬ ಹಾಕಿ ವರ್ಷ ವಾಗಿದ್ದರೂ ಅಲ್ಲಿ ಇನ್ನೂ ವಿದ್ಯುತ್ ಸರಬರಾಜಾಗಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ? ಗ್ರಾಮಗಳಲ್ಲಿ ಅಡಿಷನಲ್ ದೀಪಗಳನ್ನು ಹಾಕಬೇಕಾದರೆ ತುಂಬಾ ತೊಂದರೆ ಇದೆ, ಈ ಬಗ್ಗೆ ಕೇಳಿದರೆ ಇಲಾಖೆಯವರು ಅನೇಕ ಕಾರಣಗಳನ್ನು ಹೇಳುತ್ತಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ.ಎಚ್ ಪಟೀಲ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ನಮ್ಮ ಸರ್ಕಾರದ ಕಾರ್ಯಕ್ರಮದಲ್ಲಿ ಅತ್ಯಂತ ಹೆಚ್ಚಿನ ಗಮನ ಕೊಡಿರುವುದು ಎಂದರೆ ಗ್ರಾಮಗಳ ವಿದ್ಯುದ್ದೀಕರಣ. ಮಾನ್ಯ ಸದಸ್ಯರು ಹ್ಯಾಮ್ಲೆಟ್ಸ್ ಬಗ್ಗೆ ಕೇಳುತ್ತಿದ್ದಾರೆ. ಸೆನ್ಸಸ್ ವಿಲೇಜಸ್ ಎಂದು ಇರುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು ೨೫ ಸಾವಿರ ಹ್ಯಾಮ್ಲೆಟ್ಸ್ ಇವೆ ಅವುಗಳಲ್ಲಿ ನಾಲ್ಕಾರು ಸಾವಿರ ಹ್ಯಾಮ್ಲೆಟ್‌ಗಳಿಗೆ ಈಗಾಗಲೇ ವಿದ್ಯುದ್ದೀಕರಣ ಆಗಿದೆ. ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ನಿಗೆ ಸ್ಕೀಮ್ ಕಳುಹಿಸುವಾಗ ಮೊದಲು ಸೆನ್ಸಸ್ ವಿಲೇಜಸ್ ಕಳುಹಿಸಿ ನಂತರ ಹ್ಯಾಮ್ಲೆಟ್ಸ್ ಕಳುಹಿಸುತ್ತೇವೆ. ಆದ್ಯತೆ ಮೇರೆಗೆ ಹ್ಯಾಮ್ಲೆಟ್‌ಗಳನ್ನೂ ತೆಗೆದುಕೊಂಡಿದ್ದೇವೆ. ಉಳಿದಿರತಕ್ಕ ಹ್ಯಾಮ್ಲೆಟ್ಸ್ ಬಗ್ಗೆ ಈಗಾಗಲೇ ಹೇಳಿರುವ ಪ್ರಕಾರ ೧೯೮೮-೮೯ನೇ ಮತ್ತು ೧೯೮೯-೯೦ರಲ್ಲಿ ವಿದ್ಯುದ್ದೀಕರಣ ಮಾಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಎರಡನೆಯದು, ಕಂಬ ಹಾಕಿದ್ದಾರೆ ಆದರೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಪರ್ಟಿಕ್ಯುಲರ್ ಇನ್‌ಸ್ಟೆನ್ಸಸ್ ತಿಳಿಸಿದರೆ ಏತಕ್ಕೆ ಡಿಲೇ ಯಾಗಿದೆ. ಮೆಟೀರಿಯಲ್ಸ್ ಸಪ್ಲೈ ಆಗಲಿಲ್ಲವೋ ಅಥವಾ ಅಧಿಕಾರಿಗಳ ತಪ್ಪೋ ಎಂಬುದನ್ನು ನೋಡುತ್ತೇನೆ. ಆದರೂ ಅತ್ಯಂತ ಭರದಿಂದ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದ್ದೇವೆ, ಮುಂದೆಯೂ ಮಾಡುತ್ತೇವೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ಇನ್ನೂ ಅನೇಕ ಹ್ಯಾಮ್ಲೆಟ್ಸ್ ಇವೆ ಎಂದು ಹೇಳಿದ್ದಾರೆ. ಒಂದು ವರ್ಷಕ್ಕೆ ಎಷ್ಟು ಗ್ರಾಮಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂಬುದನ್ನು ಸಚಿವರು ಹೇಳಬೇಕು. ಮಾಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಗ್ರಾಮಗಳ ವಿದ್ಯುತ್ ಬಿಲ್ಲಿನ ಹಣವನ್ನು ಏಳೆಂಟು ವರ್ಷಗಳಿಂದ ಕಟ್ಟಿಲ್ಲ ಎಂದು ವಿದ್ಯುತ್ ಸರಬರಾಜು ನಿಲ್ಲಿಸಿದ್ದಾರೆ. ೫೦-೬೦ ಸಾವಿರ ರೂಪಾಯಿ ಬಾಕಿ ಕಟ್ಟಬೇಕಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ.ಎಚ್.ಪಟೀಲ್,—ಅಧ್ಯಕ್ಷರೇ, ಮಂಡಲ ಪಂಚಾಯಿತಿಗಳಿಂದ ಕಟ್ಟಬೇಕಾದ ವಿದ್ಯುತ್ ಶುಲ್ಕದ ಬಗ್ಗೆ ಹೇಳಿದರು. ಈ ಬಗ್ಗೆ ಬೇಡಿಕೆಗಳು ಸರ್ಕಾರಕ್ಕೆ ಬಂದಿವೆ. ಬಡ್ಡಿ ವಜಾ ಮಾಡಿದರೆ ಅಸಲು ಕಟ್ಟುತ್ತೇವೆ ಎಂದು ಮಂಡಲಗಳವರು ಹೇಳಿದ್ದಾರೆ. ೨೦-೨೫ ಸಾವಿರ ರೂಪಾಯಿ ಒಂದೊಂದು ಮಂಡಲದಿಂದ ಕಟ್ಟಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ಬಡ್ಡಿ ವಜಾ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಮಂಡಲದವರು ಅಸಲನ್ನು ಕಟ್ಟಿದರೆ ವಿದ್ಯುತ್ ಮಂಡಳಿಗೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಮಂಡಲಗಳಿಗೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ. ಶಿವಣ್ಣ.—ಇನ್ನು ಒಂದೇ ಒಂದು ವಿಚಾರದ ಬಗ್ಗೆ ಕೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಂಡಲ ಪಂಚಾಯಿತಿ ಗಳಲ್ಲಿ ಲೈನ್‌ಮನ್‌ಗಳೇನಿದ್ದಾರೆ, ಅವರು ಪ್ರಧಾನರ ಸಮ್ಮುಖದಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದರೂ ಅವರು ಮಾಡುತ್ತಿಲ್ಲ. ಆ ಲೈನ್‌ಮನ್‌ಗಳನ್ನು ಎದುರಿಸುವುದಕ್ಕೆ ಮಂತ್ರಿಗಳಿಗೂ ಆಗುವುದಿಲ್ಲ, ರಾಜ್ಯದಲ್ಲಿ ಯಾರ ಕೈಯಲ್ಲೂ ಆಗುವುದಿಲ್ಲ. ಪ್ರಧಾನರು, ಜಿಲ್ಲಾ ಪರಿಷತ್ ಸದಸ್ಯರು ಮತ್ತು ನಾವು ಹೇಳಿದರೂ ಕೂಡ ಅವರು ಕೆಲಸ ಮಾಡುವುದಿಲ್ಲ. ಆದ್ದರಿಂದ ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಮತ್ತೆ ಏನೆಂದರೆ ಹಳ್ಳಿಗಳಲ್ಲಿ ವಿದ್ಯುತ್ ಕಂಬ ಇದ್ದರೆ ತಂತಿ ಇಲ್ಲ, ತಂತಿ ಇದ್ದರೆ ಫಿಟ್ಟಿಂಗ್ಸ್ ಇಲ್ಲ, ಫಿಟ್ಟಿಂಗ್ಸ್ ಇದ್ದರೆ ಬಲ್ಬ್ ಇರುವುದಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ.ಎಚ್. ಪಟೀಲ್.—ಲೈನ್‌ಮನ್‌ಗಳ ಕೊರತೆ ಇದೆಯೆಂಬುದು ಸರ್ಕಾರದ ಗಮನದಲ್ಲಿದೆ ಯೆಂದು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಆರ್ ರಾಮಯ್ಯ.—ಅವರು ಹೇಳುತ್ತಿರುವುದು, ಇರುವವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು.

ಶ್ರೀ ಜೆ. ಎಚ್. ಪಟೇಲ್.—ಹಿಂದಿನ ಸರ್ಕಾರಗಳು ಯಾವುದೇ ಇರಲಿ, ಅವು ನಮ್ಮಷ್ಟು ಗಮನ ಈ ಬಗ್ಗೆ ತೆಗೆದುಕೊಂಡಿರಲಿಲ್ಲ. ಪಂಪ್‌ಸೆಟ್‌ಗಳ ವಿದ್ಯುದ್ದೀಕರಣ ಆಗಲೀ ರೂರಲ್ ಎಲೆಕ್ಟ್ರಿಫಿಕೇಷನ್ ಆಗಲೀ ಹೆಚ್ಚಾಗಿ ಮಾಡಿರಲಿಲ್ಲ. ಈಗ ಜಾಸ್ತಿ ಕೆಲಸ ಮಾಡಿರುವುದರಿಂದ ಜಾಸ್ತಿ ಜನ ಲೈನ್‌ಮನ್‌ಗಳು ಬೇಕಾಗುತ್ತಾರೆ. ಲೈನ್‌ಮನಗಳ ಸಂಖ್ಯೆ ಕಡಿಮೆ ಇದೆ. ಒಬ್ಬೊಬ್ಬ ಲೈನ್‌ಮನ್ ಎರಡು ಮೂರು ಗ್ರಾಮಗಳಿಗೆ ಹೋಗಬೇಕಾಗುತ್ತದೆ. ಒಂದೊಂದು ಊರಿನಲ್ಲಿ ೫೦–೨೦–೧೦೦ ಪಂಪ್‌ಸೆಟ್‌ಗಳಿವೆ. ಅದನ್ನೆಲ್ಲಾ ಅವನು ನೋಡಬೇಕು. ಅವರ ಕಷ್ಟ ಏನು ಎಂದು ಸ್ವತಃ ನನಗೆ ಗೊತ್ತಿದೆ.

ಶ್ರೀ ಎಂ. ಶಿವಣ್ಣ.—ಈ ಲೈನ್‌ಮನ್‌ಗಳು ಅಧಿಕಾರಿಗಳಿಗೆ ಹೆದರುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ನನ್ನ ಆಲೋಚನೆ ಏನು ಇದೆ ಅಂದರೆ, ಜಿಲ್ಲಾಪರಿಷತ್ತಿಗೆ ಸಾಕಷ್ಟು ಅಧಿಕಾರವನ್ನು ಕೊಟ್ಟಿರುವುದರಿಂದ ಮಂಡಲ್ ಪ್ರಧಾನ್ ಅವರು ಕಮ್ಮ ವರಮಾನದಲ್ಲಿ ಒಬ್ಬ ಲೈನ್‌ಮನ್ ಅನ್ನು ಕೆಲಸಕ್ಕೆ ತೆಗೆದುಕೊಂಡು ಅವರೇ ಮೈನ್‌ಟೈನ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡುತ್ತಿದ್ದೇವೆ ಅಲ್ಲಿಯವರೆಗೂ ಈ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರತಿಯೊಂದು ಗ್ರಾಮಕ್ಕೂ ಒಬ್ಬೊಬ್ಬ ಲೈನ್‌ಮೆನ್ ಈಗ ಬೇಕಾಗುತ್ತದೆ. ಹಿಂದೆ ೩–೪ ಗ್ರಾಮಗಳಿಗೆ ಒಬ್ಬೊಬ್ಬ ಲೈನ್‌ಮನ್ ಇದ್ದರು. ಈಗ ಆ ರೀತಿ ಆಗುವುದಿಲ್ಲ. ಅದರ ಬಗ್ಗೆಯೂ ಕೂಡ ಆಲೋಚನೆ ಮಾಡುತ್ತಿದ್ದೇವೆ. ಅದರ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ಪಿಮ್ಮೇಗೌಡ.—ಪ್ರತಿಯೊಂದು ತಾಲ್ಲೂಕಿನಲ್ಲೂ ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳನ್ನು ಕೇಳಿದರೆ, ಅವರು ಏನು ಹೇಳುತ್ತಾರೆಂದರೆ, ಕಂಬಗಳ ಕೊರತೆ ಇದೆ, ವೈರ್‌ಗಳ ಕೊರತೆ ಇದೆ, ಇದರಿಂದಾಗಿ ಸ್ಯಾಮಲೆಟ್ಸ್‌ಗಳಲ್ಲಿ ವಿದ್ಯುದ್ದೀಕರಣದ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳುವಂತಹದ್ದನ್ನು ನಾವೂ ಕೂಡ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಅದನ್ನು ಸರಿಮಾಡುವುದಕ್ಕೆ ಸರ್ಕಾರದವರು ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ? ವಿದ್ಯುಚ್ಛಕ್ತಿ ಮಂಡಲಿಗೆ ಹೆಚ್ಚು ಹಣವನ್ನು ಕೊಡುವುದೋ ಅಥವಾ ಇನ್ನೊಂದು ವಿಚಾರವೋ ಮಾಡಿ ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ಎಂಬುದನ್ನು ಮಂತ್ರಿಗಳು ತಿಳಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಕಂಬಗಳ ಕೊರತೆ ಏಕೆ ಆಯಿತು ಎಂದರೆ, ಕಂಬಗಳನ್ನು ಮಾಡತಕ್ಕಂತಹವರು ಕೆಲವೊಂದು ರೇಟನ್ನು ಕೇಳಿದರು. ಆದಕ್ಕೆ ವಿದ್ಯುಚ್ಛಕ್ತಿ ಮಂಡಲಿಯವರು ಅವರು ಕೇಳಿದ ರೇಟನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರಿಂದ ಅವರು ಕಂಬಗಳನ್ನು ಮಾಡಲಿಲ್ಲ. ಇದರಿಂದಾಗಿ ಅವರು ಕೆಲವಾರು ತಿಂಗಳು ಕಂಬಗಳ ಸಪ್ಲೈಯನ್ನೇ ಮಾಡಲಿಲ್ಲ. ಈಗ ಮತ್ತೆ ಅವರ ಜೊತೆ ಮಾತುಕತೆಯಾಗಿದ್ದು ಅದು ಸರಿಹೋಗಿದೆ. ಜನರಲ್ಲಾಗಿ ಕಂಬಗಳು ಇಲ್ಲ, ವೈರುಗಳು ಇಲ್ಲ ಅಂತ ಅಧಿಕಾರಿಗಳು ಹೇಳುತ್ತಾರೆ ಎನ್ನುವುದಕ್ಕೆ ಬದಲು, ಯಾವ ಊರಿಗೆ ಕಂಬಗಳು ಇಲ್ಲ, ಯಾವ ಊರಿಗೆ ವೈರುಗಳು ಇಲ್ಲ ಅಂದರೆ ಅದು ಮಂಜೂರಾಗಿದ್ದು, ಏಕೆ ಮಾಡಿಲ್ಲ ಅಂತ ಮಾನ್ಯ ಸದಸ್ಯರು ನನಗೆ ಲಿಖಿತ ಮೂಲಕ ತಿಳಿಸಿದರೆ, ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಐ ಬಿ. ಶಂಕರ್.—ಕರೆಂಟ್ ಇದ್ದರೂ ಓಲ್ಟೇಜ್ ಇಲ್ಲ ಎಂಬ ವಿಚಾರವನ್ನು ಸಾಕಷ್ಟು ಸಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆವಿಗೂ ಅದನ್ನು ಸರಿಮಾಡಿಲ್ಲ. ನಮ್ಮ ಭಾಗದ ಹಂಬ್ಲೆ ಹೋಬಳಿ ಪ್ರಾಗೂ ಕೆಲವು ಗ್ರಾಮಗಳಲ್ಲಿ ಈ ರೀತಿಯ ತೊಂದರೆ ಇದೆ. ಮತ್ತೆ ಮಾನ್ಯ ಮಂತ್ರಿಗಳು ಮಂಡಲ್ ಪಂಚಾಯಿತಿಯ ಪ್ರಧಾನರವರು ಲೈನ್ ಮನ್ ಒಬ್ಬನನ್ನು ನೇಮಕ ಮಾಡಿಕೊಂಡು ಅವರೇ ಮೈನ್‌ಟೈನ್ ಮಾಡುವುದಕ್ಕೆ ಸಾಧ್ಯವೇ ಎಂಬುದಾಗಿ ಆಲೋಚನೆ ಮಾಡುತ್ತಿದ್ದೇವೆಂದು ಹೇಳಿದರು. ಆದರೆ ಮಂಡಲ್ ಪಂಚಾಯಿತಿಗಳಲ್ಲಿ ಈಗಾಗಲೇ ಸಾಕಷ್ಟು ಹಣದ ಕೊರತೆ ಇದೆ. ಇದರಿಂದ ಅವರು ಲೈನ್‌ಮನ್ ಒಬ್ಬನಿಗೆ ಸಂಬಳ ಕೊಟ್ಟು ಮೈನ್‌ಟೈನ್ ಮಾಡುವುದಕ್ಕೆ ಸಾಧ್ಯ ಇಲ್ಲ. ಅದಕ್ಕೆ ಬದಲಾಗಿ ಮಂಡಲಿಯವರೇ ಲೈನ್‌ಮನ್‌ಗಳನ್ನು ನೇಮಕ ಮಾಡಿ, ಅವರಿಗೆ ಸಂಬಳವನ್ನು ವಿದ್ಯುಚ್ಛಕ್ತಿ ಮಂಡಲಿಯವರೇ ಕೊಟ್ಟು ಅವರ ಸೇವೆಯನ್ನು ಮಂಡಲ್ ಪಂಚಾಯಿತಿಯವರು ಉಪಯೋಗಿಸಿಕೊಳ್ಳುವ ರೀತಿಯಲ್ಲಿ ಮಾಡಬೇಕೇ ಹೊರತು, ಈ

ಒಂದು ಜವಾಬ್ದಾರಿಯನ್ನು ಮಂಡಲ್‌ಗಳಿಗೆ ಹೊರಿಸಬಾರದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಓಲ್ಡ್‌ಏಜ್ ಬಗ್ಗೆ ನಾನು ಈಗಾಗಲೇ ಈ ಹಿಂದೆ ಸಾಕಷ್ಟು ಸಾರಿ ಹೇಳಿದ್ದೇನೆ. ಕೆಲವು ಭಾಗಗಳಲ್ಲಿ ಈ ಪ್ರಾಬ್ಲಂ ಇದೆ. ಈ ರಾಜ್ಯದ ಹಲವಾರು ಕಡೆಗಳಲ್ಲಿ ಈ ಓಲ್ಡ್‌ಏಜ್ ಪ್ರಾಬ್ಲಂ ಇದೆ. ತಾಂತ್ರಿಕವಾಗಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವುದಕ್ಕೋಸ್ಕರ ವಿದ್ಯುಚ್ಛಕ್ತಿ ಮಂಡಲಿಯವರು ಸಿಸ್ಟಂ ಇಂಪ್ರೂವ್‌ಮೆಂಟ್ ಸ್ಕಿಂ ಅಂತ ಮಾಡುತ್ತಿದ್ದಾರೆ. ಕೆಲವು ಕಡೆ ಸಬ್ ಸ್ಟೇಷನ್‌ಗಳನ್ನು ಮಾಡುವಂತಹದ್ದು, ಹೆಚ್ಚಿನ ಕೆಪಾಸಿಟಿಯ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವಂತಹ ಕೆಲಸವನ್ನು ಕೆಲವು ಕಡೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರ ಪ್ರದೇಶದಲ್ಲಿ ಓಲ್ಡ್‌ಏಜ್ ಕಡಿಮೆ ಇದೆ ಎಂಬುದಾಗಿ ಹೇಳಿದ್ದಾರೆ. ಅದು ಯಾವ ಕಾರಣಕ್ಕಾಗಿ ಇದೆ ಎಂಬುದನ್ನು ನೋಡಿ ಅದನ್ನು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸಣ್ಣ ಸಿಮೆಂಟ್ ಘಟಕದ ಬಗ್ಗೆ.

೩೦೭೭. ಶ್ರೀ ಬಿ.ಜೆ. ಜವಂಜಿಂಡಿ (ಮಾಧೋಳ).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಮಿನಿ ಸಿಮೆಂಟ್ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಈ ಉದ್ಯಮದಲ್ಲಿ ರಾಜ್ಯ ಸರ್ಕಾರದ ವಿವಿಧ ಹಣಕಾಸು ನಿಗಮದಿಂದ ಹೂಡಿಸಿರುವ ಬಂಡವಾಳವೆಷ್ಟು?

ಇ) ಈಗ ರಾಜ್ಯದಲ್ಲಿ ಎಷ್ಟು ಮಿನಿ ಸಿಮೆಂಟ್ ಘಟಕಗಳು ಕಾರ್ಯಾರಂಭ ಮಾಡುತ್ತಿವೆ?

ಶ್ರೀ ಜಿಗಜಿಣಗಿ (ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ೯೭ ಘಟಕಗಳು.

ಆ) ರೂ. ೫೧೩೭.೯೨ ಲಕ್ಷಗಳು.

ಇ) ೨೯ ಘಟಕಗಳು.

ಶ್ರೀ ಬಿ ಜೆ. ಜವಂಜಿಂಡಿ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ರಾಜ್ಯದಲ್ಲಿ ಸುಮಾರು ೯೭ ಮಿನಿ ಸಿಮೆಂಟ್ ಘಟಕಗಳು ಇವೆ ಎಂಬುದಾಗಿಯೂ, ಇವುಗಳು ರಾಜ್ಯ ಹಣಕಾಸು ನಿಗಮದಿಂದ ಸುಮಾರು ೫೧೩೭.೯೨ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿವೆ ಎಂತಲೂ ತಿಳಿಸಿದ್ದಾರೆ. ಈ ೯೭ ಘಟಕಗಳಲ್ಲಿ ೨೯ ಘಟಕಗಳು ಮಾತ್ರ ತನ್ನ ಕಾರ್ಯವನ್ನು ಆರಂಭಿಸಿವೆ ಎಂಬುದಾಗಿ ತಿಳಿಸಿದ್ದಾರೆ. ಸುಮಾರು ೬೮ ಘಟಕಗಳು ತನ್ನ ಕೆಲಸವನ್ನು ಇನ್ನೂ ಪ್ರಾರಂಭ ಮಾಡಿಯೇ ಇಲ್ಲ. ಇನ್ನೂ ಕೆಲವು ಉದ್ದಿಮೆದಾರರು, ಹಣಕಾಸು ನಿಗಮದಿಂದ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಆ ಭಾಗದಲ್ಲಿ ಸಿಕ್ಕತಕ್ಕ ಕಚ್ಚಾ ಸಾಮಗ್ರಿಗಳನ್ನು ಅಂದರೆ ಬಿಜಾಪುರ ಹಾಗೂ ಬೆಳಗಾಂ ಭಾಗಗಳಲ್ಲಿ ಸಿಕ್ಕುವಂತಹ ಲೈಮ್ ಸ್ಟೋನ್ ಅನ್ನು ಮಹಾರಾಷ್ಟ್ರಕ್ಕೆ ಕಳುಹಿಸಿ ಅದರಿಂದ ಹೆಚ್ಚು ಹಣವನ್ನು ಗಳಿಸುವ ಪ್ರಯತ್ನ ನಡೆಯುತ್ತಿದೆ. ಇನ್ನು ಕೆಲವು ಉದ್ದಿಮೆದಾರರು ಈ ಘಟಕಗಳನ್ನು ಸಿಕ್ ಇಂಡಸ್ಟ್ರೀಸ್ ಎಂಬುದಾಗಿ ಘೋಷಣೆ ಮಾಡಿ, ಸಾಲವನ್ನಾಗಿ ತೆಗೆದುಕೊಂಡಿರುವ ಹಣವನ್ನು ಎತ್ತಿ ಹಾಕುವ ಪರಿಪಾಠ ಬಹಳವಾಗಿ ನಡೆಯುತ್ತಿದೆ. ೯೭ ಘಟಕಗಳಿಗೆ ಸಾಲವಾಗಿ ಕೊಟ್ಟಿರುವಂತಹ ಹಣ ಸರಿಯಾಗಿ ಮರುಪಾವತಿಯಾಗುತ್ತಿದೆಯೇ? ಅವರಿಂದ ಆ ರೀತಿ ಸರಿಯಾಗಿ ಹಣ ಮರುಪಾವತಿಯಾಗದಿದ್ದರೆ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಿಕ್ ಇಂಡಸ್ಟ್ರೀಸ್‌ಗಳು ಎಷ್ಟು ಇವೆ ಎಂಬುದನ್ನು ಮಾನ್ಯ ಮಂತ್ರಿಗಳು ಘೋಷಣೆ ಮಾಡಬೇಕು. ಅವರಿಂದ ಹಣವನ್ನು ವಸೂಲು ಮಾಡುವ ವಿಧಾನ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.